ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ

ಸಿ.ಸಿ. ನಂ.4735-2023

ಸಿಡಬ್ಲ್ಯೂ -11 ಪಿಡಬ್ಲ್ಯೂ -07

ಸಾಕ್ಷಿಯ ಹೆಸರು - ರೇಣುಕಾ
ಗಂಡನ ಹೆಸರು - ಶವಕುಮಾರ
ವಯಸ್ಸು - 44 ವರ್ಷ
ಉದ್ಯೋಗ - ಮಹಿಳಾ ಮುಖ್ಯ ಪೇದೆ
ವಾಸ - ಹುಮನಾಬಾದ ಪೋಲಿಸ್ ಠಾಣೆ.

ದಿನಾಂಕಃ 16-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸ.ಸ.ಅ.ರವರಿಂದಃ

ನಾನು 21.07.2021 ರಿಂದ ಇಲ್ಲಿಯವರೆಗೆ ಮಹಿಳಾ ಮುಖ್ಯ ಪೇದೆ ಅಂತಾ ಹುಮನಾಬಾ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25.04.2023 ರಂದು ಮಧ್ಯಾಹ್ನ 2.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ಒಂದು ಕನ್ನಡದಲ್ಲಿ ಟೈಪ್ ಮಾಡಿದ ದೂರು ಅರ್ಜಿ ಸಲ್ಲಿಸಿದ್ದು ಅದನ್ನು ಸ್ವೀಕರಿಸಿಕೊಂಡು ಅದರ ಸಾರಾಂಶದ ಆಧಾರದ ಮೇಲೆ ಠಾಣಾ ಗುನ್ನಾ ಸಂ.85/2023 ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ & ಮೇಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಅದೇ ದಿನ ಮಧ್ಯಾಹ್ನ 4.30 ರಿಂದ 5.30 ರವರೆಗೆ ಘಟನಾ ಸ್ಥಳದಲ್ಲಿ ಚಾಸಾ.1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ.2 & 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಭಾವಚಿತ್ರವನ್ನು ತೆಗೆದಿರುತ್ತೇನೆ

ಅದೇ ದಿನ ಚಾಸಾ.4 ರಿಂದ 6 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿ.26.04.2023 ರಂದು ಚಾಸಾ.1 ರವರ ಮರು ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿ.02.08.2023 ರಂದು ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೆನೆ.

ದಿ.22.09.2023 ರಂದು ಆರೋಪಿತನು ಖುದ್ದಾಗಿ ಠಾಣೆಗೆ ಹಾಜರಾದ ಮೇರೆಗೆ ಆತನ

ಬಂಧನಕ್ಕನುಗುಣವಾಗಿ ಅನುಸರಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿ ಆರೋಪಿತನ ಸ್ವಖುಸಿ ಹೇಳಿಕೆ ಪಡೆದಿರುತ್ತೆನೆ.

ಅದೇ ದಿನ ಆರೋಪಿತನು ಹಾಜರುಪಡಿಸಿದ ಒಂದು ಕಬ್ಬಿಣದ ಪಂಚನ್ನು ಚಾಸಾ.4 & 5 ರವರ ಸಮಕ್ಷಮ ಸಾಯಂಕಾಲ 4.30 ರಿಂದ 5.45 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಜಪ್ತಿ ಪಡಿಸಿಕೊಂಡು ಅದೇ ಸಮಯದಲ್ಲಿ ಒಂದು ಭಾವಚಿತ್ರ ವನ್ನು ತೆಗೆದಿರುತ್ತೆನೆ

ಚಾಸಾ.8 ರವರ ಕಡೆಯಿಂದ 65(ಬಿ) ರಡಿ ಪ್ರಮಾಣ ಪತ್ರ ವನ್ನು ಪಡೆದುಕೊಂಡಿರುತ್ತೇನೆ

ದಿ.23.09.2023 ರಂದು ತನಿಖೆ ಪೂರ್ಣಗೊಂಡ ಕಾರಣ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೆನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರ.ವ.ವರದಿಯನ್ನು ಅದನ್ನು ಈಗ ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು 2 ಭಾವಚಿತ್ರವನ್ನು ಈಗ ನಿಪಿ6 & 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು 65(ಬಿ) ಪ್ರಮಾಣ ಪತ್ರ ವನ್ನು ನಿಪಿ8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

ಆರೋಪಿಯ ಸ್ವಖುಷಿ ಹೇಳೀಕೆಯನ್ನು ನಿಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

ಮು.ಮಾ.ನ್ನು ನೋಡಿ ಗುರುತಿಸಿರುತ್ತೇನೆ.

ಆರೋಪಿತನು ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಿದ್ದ ಕಾರಣ, ಆರೋಪಿ ಪರ ವಕೀಲರು ಗುರುತಿಸುವಿಕೆಯನ್ನು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ. ಎಂ.ಎನ್.ಪಿ. ಆರೋಪಿತನ ಪರ ವಕೀಲರವರಿಂದಃ</u>

ದಿ.19.04.2023 ರಂದು ಘಟನೆ ನಡೆದಿರುತ್ತದೆ. ಆ ದಿನ ನಮ್ಮ ಠಾಣೆಗೆ ಯಾವುದೇ

ಎಂ.ಎಲ್.ಸಿ. ಬಂದಿರುವುದಿಲ್ಲ. ಚಾಸಾ.1 ರವರು ದೂರು ನೀಡಲು ಠಾಣೆಗೆ ಬಂದಾಗ ಅವರಿಗೆ ಗಾಯಗಳು ಆದ ಬಗ್ಗೆ ಕಂಡು ಬಂದಿರುತ್ತದೆ. ಚಾಸಾ.1 ರವರು ದೂರು ನೀಡಲು ಒಬ್ಬರೆ ಬಂದಿರುತ್ತಾರೆ. ದಿ.22.09.2023 ರಂದು ಮು.ಮಾ.ನ್ನು ಜಪ್ತಿ ಪಡಿಸಿಕೊಂಡಿರುತ್ತೆನೆ. ಮು.ಮಾ.ನ್ನು 4-5 ತಿಂಗಳು ಮಾಡಿದ್ದಿರಿ ವಿಳಂಬಕ್ಕೆ ಕಾರಣ ಏನು ಎಂದರೆ ಸಾಕ್ಷಿಯು ಆರೋಪಿಯು ಸಿಕ್ಕಿರಲಿಲ್ಲ ಎಂದು ನುಡಿಯುತ್ತಾರೆ. ಜಪ್ತಿ ಪಡಿಸಿದ ಮು.ಮಾ.ನ್ನು 4 ದಿನಗಳ ನಂತರ ನ್ಯಾಯಾಲಯಕ್ಕೆ ನೀಡಿರುತ್ತೆನೆ. ಆ 4 ದಿನಗಳ ಕಾಲ ಮು.ಮಾ.ನ್ನು ನಮ್ಮ ಠಾಣೆಯ ಮು.ಮಾ.ಕೋಣೆಯಲ್ಲಿ ಇಟ್ಟಿರುತ್ತೇನೆ. ಮು.ಮಾ.ಠಾಣೆ ಇನಚಾರ್ಜ ಅಧಿಕಾರಿಯ ಸಹಿಯನ್ನು ಪಡೆದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆ & ಮರು ಹೇಳೀಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಹೆದರಿಸಿ ಅವರ ಸ್ವಖುಸಿ ಹೇಳೀಕೆ ಪಡೆದಿರಿ ಎಂದರೆ ಸರಿಯಲ್ಲ. ಈ ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ.1 ರವರ ಜೊತೆ ಮೀಲಾಪಾಗಿ ಆರೋಪಿಗೆ ತೊಂದರೆ ಕೊಡಲು ಸುಳ್ಳು ತನಿಕೆ ಮಾಡಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.